ಬೆವರ ಹನಿ

Online Newspaper Clipping Service
**Dtd- Wednesday, 17th, July- 2019**



# ಯುನೆಸ್ಕೊ ಕೋಲಾರ ವಿಭಾಗ ಉದ್ಘಾಟನೆ

ಕೋಲಾರ: ಅಂತಾರಾಷ್ಟ್ರೀಯ ಜೈವಿಕ ನೀತಿ ಶಾಸ್ತ್ರದ ಯುನೆಸ್ಕೊ ಘಟಕದ ಕೋಲಾರ ವಿಭಾಗದ ಉದ್ಘಾಟನಾ ಸಮಾರಂಭ ಜುಲೈ 17 ಬುಧವಾರ ಬೆಳಗ್ಗೆ 10 ಘಂಟೆಗೆ ಶ್ರೀ ದೇವರಾಜ ಅರಸ್ ವೈದ್ಯಕೀಯ ವಿದ್ಯಾ ಸಂಸ್ಥೆಯ ಅಂಗ ರಚನಾ ಶಾಸ್ತ್ರ ವಿಭಾಗದ ಎ.ವಿ.ಸಂಭಾಗಣ (ಮೊದಲನೇ ಮಹಡಿ) ದಲ್ಲಿ ನಡೆಯಲಿದೆ.

ಜೈವಿಕ ನೀತಿ ಶಾಸ್ತ್ರವು ಮಾನವಜೀವ ವಿಜ್ಞಾನದ ಹೊಸ ತಂತ್ರಜ್ಞಾನ ಮತ್ತು ಆವಿಷ್ಕಾರಗಳ ನೈತಿಕ ಆಯಾಮವನ್ನು ಪರಿಶೀಲಿಸುವ ವೈದ್ಯಕೀಯ ಶಾಸ್ತ್ರ. ಆನುವಂಶಿಕ ತಳಿಗಳ ಸಂಶೋಧನೆ, ಅಂಗಾಂಗಗಳ ಕಸಿ ಮೊದಲಾದ ಹೊಸ ವೈದ್ಯಕೀಯ ಸಂಶೋಧನೆಗಳು ಮಾನವ ಜೀವ ವಿಜ್ಞಾನಕ್ಕೆ ಹೊಸ ಸವಾಲುಗಳನ್ನು ತಂದೊಡ್ಡಿವೆ. ಇವನ್ನು ಕ್ರಮ ಬದ್ಧವಾಗಿ ಅಧ್ಯಯನ ಮಾಡುವುದು ಜೈವಿಕ ನೀತಿ ಶಾಸ್ತ್ರದ ಹೊಣೆಯಾಗಿದೆ.

ಜೈವಿಕ ನೀತಿ ಶಾಸ್ತ್ರದ ಅಧ್ಯಯನ ಕ್ರಮವು ಈಗಾಗಲೇ ಹಲವಾರು ವಿಶ್ವವಿದ್ಯಾಲಯಗಳಲ್ಲಿ ಪ್ರಾರಂಭಿಕ ಹಂತದಲ್ಲಿ ಪರಿಚಯಿಸಲ್ಪಟ್ಟಿದೆ. ಜುಲೈ 17ರಂದು ದೇವರಾಜ ಅರಸ್ ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಯು, ಯುನೆಸ್ಕೊ ಜೈವಿಕ ನೀತಿ ಶಾಸ್ತ್ರ ಘಟಕವನ್ನು ಅಧಿಕೃತವಾಗಿ ಉದ್ಘಾಟಿಸುವುದರ ಮೂಲಕ, ಈ ನಿಟ್ಟಿನಲ್ಲಿ ಪ್ರಗತಿಯನ್ನು ಸಾಧಿಸಲಿದೆ. 54 ದೇಶಗಳಲ್ಲಿ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಯುನೆಸ್ಕೊ ಅಧಿಕೃತ ಘಟಕಗಳ ಸಾಲಿಗೆ ಸೇರ್ಪಡೆಯಾಗುವುದರ ಮೂಲಕ ಶ್ರೀ ದೇವರಾಜ ಅರಸ್ ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆ, ಕೋಲಾರ ಜೈವಿಕ ನೀತಿ ಶಾಸ್ತ್ರ ವಿಭಾಗದಲ್ಲಿ ಪ್ರಮುಖ ಸ್ಥಾನ ಪಡೆಯಲಿದೆ.

ಕೋಲಾರಪತ್ರಿಕೆ

## ಅರಸು ಕಾಲೇಜಿನಲ್ಲಿ ಜೈವಿಕ ನೀತಿಶಾಸ್ತ್ರ ಯುನೆಸ್ಕೋ ಘಟಕ

ಕೋಲಾರದ ಹೊರವಲಯದ ದೇವರಾಜ ಅರಸ್ ಉನ್ನತಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯ ಅಂಗರಚನಾ ಶಾಸ್ತ್ರ ವಿಭಾಗದ ಮೊದಲನೇ ಮಹಡಿ ಸಭಾಂಗಣದಲ್ಲಿ ಇಂದು ಬೆಳಿಗ್ಗೆ ೧೦ ಘಂಟೆಗೆ ಅಂತರರಾಷ್ಟ್ರೀಯ ಜೈವಿಕ ನೀತಿಶಾಸ್ತ್ರದ ಯುನೆಸ್ಕೋ ಘಟಕದ ಉದ್ಘಾಟನಾ ಸಮಾರಂಭ.

ಜೈವಿಕ ನೀತಿಶಾಸ್ತ್ರ ಮಾನವಜೀವ ವಿಜ್ಞಾನದ ಹೊಸ ತಂತ್ರಜ್ಞಾನ ಮತ್ತು ಆವಿಷ್ಕಾರಗಳ ನೈತಿಕ ಆಯಾಮ ಪರಿಶೀಲಿಸುವ ವೈದ್ಯಕೀಯ ಶಾಸ್ತ್ರ. ಅನುವಂಶಿಕ ತಳಿಗಳ ಸಂಶೋಧನೆ, ಅಂಗಾಂಗ ಕಸಿ ಮೊದಲಾದ ಹೊಸವೈದ್ಯಕೀಯ ಸಂಶೋಧನೆಗಳ ಕ್ರಮಬದ್ಧ ಅಧ್ಯಯನ ಮಾಡುವಿಕೆ ಮೂಲ ಧ್ಯೇಯ.

ಬಂಗಾರಪೇಟೆಯಲ್ಲಿ